THE
WAY OF WISDOM

ಜ್ಞಾನಮಾರ್ಗಸೂಚನೆ

ಒಂಭತ್ತನೆ ಛಾಪೆ



MANGALORE
PUBLISHED BY PFLEIDERER & RIEHM
1866

Price 1 Pie. ಕ್ರಯ ೧ ಪೈ.

ಜ್ಞಾನಮಾರ್ಗಸೂಚನೆ.

ಒಬ್ಬ ಪಾದ್ರಿ ಅಜ್ಞಾನಪುರದಲ್ಲಿ ಮೂರು ದಿನ ತನಕ
ಉಪದೇಶ ಮಾಡಿ, ಹೊರಟು ಹೋಗಲಿಕ್ಕೆ ಇರುವಾಗ,
ಆ ಊರೊಳಗಿಂದ ನಾಲ್ಕು ಮಂದಿ ಒಕ್ಕಲಿಗರು ಬಂದು
ಹೇಳಿದ್ದು:

ನೀವು ಮಾಡಿದ ಉಪದೇಶ ಕೇಳಿದ್ದರಿಂದ ನಮಗೆ ಬಹಳ
ಸಂತೋಷವಾಯಿತು. ಆದರೆ ನೀವು ಹೋದ ಮೇಲೆ ಎ
ಲ್ಲಾ ಮರತು ಹೋಗುತ್ತದೆ. ಆದದರಿಂದ ಅದರ ಸಾರಾಂ
ಶ ಒಂದು ಕಾಗದದ ಮೇಲೆ ಬರದು ಕೊಟ್ಟರೆ ನಾವು ಅದ
ನ್ನು ಆಗ್ಗಾಗ್ಗೆ ಓದಿ ಪೂರ್ಣವಾಗಿ ತಿಳಿಯ ಬಹುದು.

ಪಾದ್ರಿ. ಈ ಸಾಯಂಕಾಲದಲ್ಲಿ ನಾನು ಹೋಗಲಿಕ್ಕಿ
ದ್ದೆನು. ಆದರೆ ನೀವು ಬಂದು ಹೀಗೆ ಬೇಡಿ ಕೊಂಡದರಿಂದ
ಇನ್ನೂ ಒಂದು ದಿವಸ ಇಲ್ಲಿ ಇದ್ದು ಈ ಉಪದೇಶದ ಸಾ
ರಾಂಶ ಒಂದು ಕಾಗದದಲ್ಲಿ ಬರದು ಹೋಗುತ್ತೇನೆ.

ಒಬ್ಬ ಒಕ್ಕಲಿಗನು. ಬಹಳ ಒಳ್ಳೇದಾಯಿತು. ಆದರೆ ನೀವು ಅಪ್ಪಣೆ ಕೊಟ್ಟರೆ ಇನ್ನೊಂದು ವಿಜ್ಞಾಪನೆ ಉಂಟು.

ಪಾದ್ರೆ. ಅಂಜ ಬೇಡಿ. ಅದು ಏನು? ಹೇಳಿರಿ!

ಒಕ್ಕಲಿಗ. ನಾವು ಬಹಳ ಓದಿದವರಲ್ಲವೆಂತಾ ಬರೆಯುವಾಗ ಮನಸ್ಸಿಗೆ ತಂದು, ನಮ್ಮಂಥಾ ಮೂಢ ಜನಕ್ಕೆ ನೆಟ್ಟಗೆ ತಿಳಿಯುವ ಹಾಗೆ ಬರೆಯ ಬೇಕು.

ಪಾದ್ರೆ. ಎಲ್ಲರಿಗೆ ತಿಳಿಯುವ ಹಾಗೆ ಬರೆಯುತ್ತೇನೆ. ನಾಳೆ ಮಧ್ಯಾನ್ಹಕ್ಕೆ ತಿರಿಗಿ ಬರ್ರಿ, ಆಗ ಬರೆದದ್ದು ಓದಿ ನಿಮಗೆ ಕೊಡುವೆನು.

ಒಕ್ಕಲಿಗ. ನೀವು ಅಪ್ಪಣೆ ಕೊಟ್ಟ ಹಾಗೆ ಈಗ ಹೋಗಿ ನಾಳೆ ಬರುತ್ತೇವೆ.

ಮರು ದಿನ ಮಧ್ಯಾನ್ಹಕ್ಕೆ ಆ ಒಕ್ಕಲಿಗರು ಇನ್ನೂ ಇಪ್ಪತ್ತು ಮೂವತ್ತು ಜನ ಕೂಡಿ ಕೊಂಡು ತಿರಿಗಿ ಪಾದ್ರೆಯ ಬಳಿಗೆ ಬಂದು, ನೀವು ನಿನ್ನೆ ಹೇಳಿದ ಸಾರಾಂಶವನ್ನು ಬರೆದಿದ್ದೀರೋ ಎಂದು ಕೇಳಿದರು.

ಪಾದ್ರೆ. ಹೌದು ಬರೆದಿದ್ದೇನೆ. ಎಲ್ಲರು ಕೂತು ಕೊಳ್ಳಿರಿ. ನಿಮಗೆ ಓದಿ ಹೇಳುತ್ತೇನೆ.

ಅವರೆಲ್ಲರೂ ಕುಳಿತ ಮೇಲೆ ಪಾದ್ರೆ ಘಟ್ಟಿ ಶಬ್ದದಿಂದ ಓದಿ ಹೇಳಿ ತೀರಿದ ಬಳಿಕ, ನಿಮಗೆ ಎಲ್ಲಾ ಪೂರ್ಣವಾಗಿ ತಿಳಿಯ ಬಂತೇ, ಎಂದು ಕೇಳಿದರು.

ಜನರು. ಹೌದು ಎಲ್ಲಾ ಪೂರ್ಣ ತಿಳಿಯ ಬಂತು; ಏನೂ ಅನುಮಾನವಿಲ್ಲ ಎಂದು, ಹೇಳಿದರು.

ಒಬ್ಬನು. ನಮ್ಮಲ್ಲಿ ಒಬ್ಬೊಬ್ಬನಿಗೆ ಒಂದೊಂದು ಪ್ರತಿ ಶಿಕ್ಕುವ ಹಾಗೆ ಅದನ್ನು ಛಾಪಿಸಿ ಕೊಡ ಬೇಕು.

ಬಹಳ ಮಂದಿ — ಹೌದು ಹೌದು ಛಾಪಿಸಿರಿ, ಅದು ಬಹಳ ಮಂದಿಗೆ ಉಪಯೋಗವಾಗಿರುವದು; ಅದರೊಳಗಿನ ಮಾತುಗಳೆಲ್ಲಾ ಬೀಜ ಮಾತುಗಳು.

ಪಾದ್ರೆ. ಒಳ್ಳೇದು, ಒಂದುವೇಳೆ ಅದನ್ನು ಛಾಪಿಸಲಿಕ್ಕೆ ಕೊಡುವೆನು; ಅಚ್ಚು ಆದ ಮೇಲೆ ನಿಮ್ಮಲ್ಲಿ ಒಬ್ಬೊಬ್ಬನಿಗೆ ಒಂದೊಂದು ಪ್ರತಿ ಕಳುಹಿಸುತ್ತೇನೆ.

ಜನರು. ಅಗತ್ಯವಾಗಿ ಛಾಪಿಸಲಿಕ್ಕೆ ಕೊಟ್ಟು ಕಳುಹಿಸ ಬೇಕು.

ಆ ಮೇಲೆ ಪಾದ್ರೆ ಹೀಗೆ ಮಾಡ ಬೇಕೆಂದು ತಿಳಿದು ಅದಕ್ಕೆ ಜ್ಞಾನಮಾರ್ಗಸೂಚನೆ ಎಂಬ ಹೆಸರು ಇಟ್ಟು, ಅದನ್ನು ಛಾಪಿಸಲಿಕ್ಕೆ ಮಂಗಳೂರಿಗೆ ಕಳುಹಿಸಿದನು.

ಜ್ಞಾನಮಾರ್ಗಸೂಚನೆ.

ಆರಂಭದಲ್ಲಿ ಒಬ್ಬನೇ ದೇವರಾಗಿರುವ ಪರಮಾತ್ಮನು ಇಹ ಲೋಕ ಪರಲೋಕಗಳನ್ನು ನಿರ್ಮಾಣ ಮಾಡಿದನು. ಆತನು ಈ ಲೋಕದಲ್ಲಿ ಲೆಖ್ಖವಿಲ್ಲದ ಪ್ರಾಣಿಗಳನ್ನು ಹುಟ್ಟಿಸಿದನು. ಆದರೆ ಈ ಸಕಲ ಪ್ರಾಣಿಗಳೊಳಗೆ ಮನುಷ್ಯರನ್ನು ಹೆಚ್ಚು ಮಾಡಿ ಅವರನ್ನು ತನ್ನ ಸ್ವರೂಪದ ಹಾಗೆ ಜ್ಞಾನಿಗಳಾಗಿಯೂ, ಸುಗುಣಿಗಳಾಗಿಯೂ, ಹುಟ್ಟಿಸಿದನು. ಹೀಗಿರಲಾಗಿ ಅವರು ತಮ್ಮನ್ನು ಹುಟ್ಟಿಸಿ ಸಂರಕ್ಷಣೆ ಮಾಡುವ ದೇವರೊಬ್ಬನಿಗೆ ಬಹಳ ಪ್ರೀತಿಯಿಂದಲೂ, ಭಕ್ತಿಯಿಂದಲೂ, ನಡದು ಆತನ ಕೃಪೆ ಪಡ ಕೊಂಡು ದುಖ್ಖ ಕಷ್ಟ ರೋಗ ಬೇನೆಗಳನ್ನು ತಿಳಿಯದೆ, ಬಹಳ ಸುಖದಿಂದ ಇದ್ದರು.

ಆದರೆ ಆ ಮೇಲೆ ದೊಡ್ಡ ಮೋಸಗಾರನಾದ ಪಿಶಾಚನು ತಂತ್ರದಿಂದ ವೇಷ ಮಾರ್ಪಡಿಸಿ, ನೀವು ದೇವರ ಆಜ್ಞೆ ಮೀರಿದರೆ ಬಹಳ ದೊಡ್ಡವರೂ ಮಹಾ ಜ್ಞಾನಿಗಳೂ ಆಗುವಿರೆಂದು ಹೇಳಿದನು. ಈ ಮೋಸಗಾರನ ಮಾತುಗಳು ಕೇಳುತ್ತಲೇ ಅವರೊಳಗೆ ದುರಾಶೆ ಹುಟ್ಟಿ ಮರುಳರಾಗಿ ದೇವರ ಆಜ್ಞೆ ಮೀರಿದರು. ದೇವರ ಆಜ್ಞೆ ಮೀರೋಣದರಿಂದ ಅವರು ದೇವರ ಶಾಪಕ್ಕೂ, ದುಖ್ಖಕ್ಕೂ, ಕಷ್ಟಕ್ಕೂ, ಸಾವಿಗೂ, ಸತ್ತ ಮೇಲೆ

ನರಕಕ್ಕೂ ಗುರಿಯಾದರು. ಯೆಲ್ಲರೂ ಕೆಟ್ಟು ಹೋಗಿ, ದೇವರ ಆಜ್ಞೆಗಳನ್ನು ಲಕ್ಷ್ಯಕ್ಕೆ ತಾರದೆ ದಿನಂಪ್ರತಿ ದುಷ್ಟರಾಗಿ ಬೆಳೆಯು ವದರಿಂದ, ಆ ಮೇಲೆ ದೇವರು ಜಲಪ್ರಳಯವನ್ನು ಕಳುಹಿಸಿ ಎಂಟು ಮಂದಿ ಬಿಟ್ಟರ ಹೊರ್ತು ಎಲ್ಲಾ ಮನುಷ್ಯರನ್ನು ನಾಶ ಮಾಡಿದನು.

ಆ ಮೇಲೆ ಆ ಎಂಟು ಮಂದಿಯ ಮಕ್ಕಳು ಮತ್ತೂ ಕೆಟ್ಟು ಹೋಗಿ, ಹೆಚ್ಚು ಹೆಚ್ಚಾಗಿ ಪಾಪದಲ್ಲಿಯೂ, ಅಜ್ಞಾನದ ಕತ್ತಲೆಯಲ್ಲಿಯೂ, ಬಿದ್ದರು. ಅವರು ಸತ್ಯ ದೇವರನ್ನು ಅಗದೀ ಮರತು ಬಿಟ್ಟು, ತಮ್ಮ ಮನೋಕಲ್ಪನೆಯಿಂದ ಸುಳ್ಳು ದೇವರುಗಳನ್ನೂ ಸುಳ್ಳು ಶಾಸ್ತ್ರಗಳನ್ನೂ ಕಲ್ಪಿಸಿ ಇಟ್ಟರು. ದುಷ್ಟರೂ ಕಳ್ಳರೂ ಹ್ಯಾಗೆ ಸತ್ಪುರುಷರಿಗೆ ದೂರವಾಗುತ್ತಾರೋ, ಹಾಗೆಯೇ ಪಾಪದ ಮೇಲೆ ಪ್ರೀತಿ ಇಡುವ ಮನುಷ್ಯರು ಸುಗುಣ ಮೂರ್ತಿಯಾಗಿರುವ ಪರಮಾತ್ಮನಿಗೆ ದೂರವಾಗಿ, ತಮ್ಮ ಹಾಗೆಯೇ ಪಾಪಮೂರ್ತಿಗಳಾಗಿರುವ ದೇವರುಗಳನ್ನು ಕಲ್ಪಿಸಿದರು. ಅದರಿಂದ ಅವರು ಈ ಹಿಂದು ದೇಶದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ತುಂಬಿರುವ ಬ್ರಹ್ಮ, ವಿಷ್ಣು, ಶಿವ ಮೊದಲಾದ ಗಂಡು ಹೆಣ್ಣು ದೇವರುಗಳನ್ನು; ಮತ್ತು ವಿಲಾಯತಿಯಲ್ಲಿ ಯುಪಿತರ್, ಯೂನೋ ಥೋರ್, ಮೊದಲಾದ

ವರನ್ನು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಸುಳ್ಳು ದೇವರುಗಳನ್ನು ಆ ಕಾಲದಲ್ಲಿ ಮಾಡಿ ಇಟ್ಟರು. ಆ ಮಂದಿಗಳಿಗೆ ಹಾದಿ ತಪ್ಪಿದ ಮಾರ್ಗಸ್ಥನ ಗತಿಯಾಯಿತು. ಅದು ಹ್ಯಾಗಂದರೆ: ಸೂರ್ಯ ಮುಣುಗಿ ಕತ್ತಲೆ ಮುತ್ತಿದ ಮೇಲೆ, ಹಾದಿಗಾರನು ಖರೇ ಮಾರ್ಗ ತಪ್ಪಿ ಅನೇಕ ಸುಳ್ಳು ಮಾರ್ಗಗಳಲ್ಲಿ ಬಿದ್ದು ಹ್ಯಾಗೆ ಮೋಸ ಹೋಗುತ್ತಾನೋ, ಹಾಗೆಯೇ ಜ್ಞಾನದ ಬೆಳಕು ಕಳೆದು ಅಜ್ಞಾನದ ಕತ್ತಲೆಯಲ್ಲಿ ಬಿದ್ದ ಮನುಷ್ಯರು ನಿಜ ಮಾರ್ಗ ನಿಜ ದೇವರನ್ನು ತಪ್ಪಿ, ಅನೇಕ ಸುಳ್ಳು ಮಾರ್ಗಗಳನ್ನೂ ಸುಳ್ಳು ದೇವರುಗಳನ್ನೂ ತಮ್ಮ ತಮ್ಮೊಳಗೆ ಬಡಿದಾಡುವ ಶಾಸ್ತ್ರ ಪುರಾಣಗಳನ್ನೂ ಮನೋ ಕಲ್ಪನೆಯಿಂದ ಹುಟ್ಟಿಸಿ ಮೋಸ ಹೋದರು, ಅನಂತ ಮಹಿಮೆಯಿಂದಲೂ ಅನಂತ ಸುಲಕ್ಷಣಗಳಿಂದಲೂ, ಪ್ರಕಾಶಿಸುವ ಪರಮಾತ್ಮನು ಸಕಲ ದುರ್ಗುಣಗಳಿಂದ ತುಂಬಿರುವ ಮನುಷ್ಯರ ಹಾಗಿದ್ದಾನೆಂದು ಎಣಿಸಿ, ಆತನೊಬ್ಬನಿಗೆನೆ ಮಾಡ ತಕ್ಕ ಸೇವೆ ನಮಸ್ಕಾರಗಳನ್ನು ಪಂಚಾಲರ ಕೈಯಿಂದ ಉಂಟಾದ ಜೀವವಿಲ್ಲದ ನಾಶನವಾಗುವ ಗೊಂಬೆಗಳಿಗೆ ಮಾಡಿ ಆತನಿಗೆ ಅಪಮಾನ ಮಾಡಿದರು. ಅವರ ವಿಚಾರ ಹ್ಯಾಗಿರುವದಂದರೆ: ಒಬ್ಬ ಮಗನು, ಹುಟ್ಟಿಸಿದ ತಂದೆಯನ್ನು ಬಿಟ್ಟು ಕಳ್ಳನನ್ನು ಆಶ್ರಯಿಸಿ ಕಳ್ಳನ ಚಾಕರಿ ಮಾಡಿ ಅವನನ್ನ

ತಂದೆ ಎಂದು ಹೇಳಿದ ಹಾಗೆ ಆಯಿತು. ಮನುಷ್ಯರು ಹೀ
ಗೆ ಸತ್ಯ ದೇವರನ್ನು ಬಿಟ್ಟ ಕಾರಣ, ಆತನೂ ಅದೇ ಪ್ರಕಾರ
ಅವರನ್ನು ಬಿಟ್ಟು ತಮ್ಮ ಕೆಟ್ಟ ಮನಸ್ಸಿಗೆ ಬಂದ ಹಾಗೆ ನಡೆ
ಯಗೊಟ್ಟನು. ಅದರಿಂದ ಅವರು ಇನ್ನು ಹೆಚ್ಚು ಹೆಚ್ಚಾಗಿ
ಅಜ್ಞಾನದೊಳಗೆ ಬಿದ್ದು, ಪಿಶಾಚನಿಗೆ ವಶವಾಗಿ ಸಕಲ ದು
ರ್ಗುಣಗಳಿಂದಲೂ ದುರ್ನಡತೆಗಳಿಂದಲೂ ತುಂಬಿ ಹೋದ
ರು. ಅವರೊಳಗೆ ಅಹಂಕಾರ, ಸುಳ್ಳು, ಕಳವು, ಹಾದರ, ಅ
ಪಸಾಕ್ಷಿ, ಅನ್ಯಾಯ, ಕಪಟ, ಮೋಸ ಮುಂತಾದ ಅನೇಕ ಪಾ
ಪಗಳು ಬಹಳವಾಗಿ ಬೆಳದು ದೇವರ ಭಕ್ತಿ ಸುಖ ಸಮಾಧಾ
ನ ಓಡಿ ಹೋಗಿ ಈ ಭೂಲೋಕವು ದೇವರ ಶಾಪದಿಂದ ಸು
ತ್ತಿ ಕೊಂಡು ಕಷ್ಟ, ಬಡತನ, ರೋಗ, ಬರ, ಯುದ್ಧ ಮೊದ
ಲಾದ ಕೇಡುಗಳಿಂದ ಮುಚ್ಚಿಕೊಂಡಿರುತ್ತದೆ. ಆದರೆ ಈ ಶಾ
ಪವೂ ಈ ಶಿಕ್ಷೆಯೂ ಸಾಲದೆ, ಸತ್ತ ಮೇಲೆ ಅದು ಅನಂತ
ಪಾಲಷ್ಟು ಹೆಚ್ಚಾಗುವದು. ಯಾಕಂದರೆ ಸತ್ತ ಮೇಲೆ ದೇ
ವರು ಸಕಲ ಮನುಷ್ಯರಿಗೆ ಚೌಕಸಿ ಮಾಡಿ ಸದಾಕಾಲ ಬೆಂಕಿ
ಯಿಂದ ಉರಿಯುವ ನರಕದಲ್ಲಿ ಪಾಪಾತ್ಮರನ್ನು ನೂಕಿಸುವನು.

ಹೀಗೆ ಎಲ್ಲಾ ಮನುಷ್ಯರು ದೇವರ ಶಿಟ್ಟಿಗೂ ನರಕದ
ನಿತ್ಯ ಶಿಕ್ಷೆಗೂ ಒಳ ಬಿದ್ದ ಮೇಲೆ, ಆತನ ಶಿಟ್ಟು ಹೋಗಿ ಆ
ತನ ಪ್ರೀತಿ ತಿರಿಗಿ ಬರ ಮಾಡುವ ಉಪಾಯವು ಎಲ್ಲಿ ದೊರ

ಕುವದು? ಅಂಥಾ ಉಪಾಯವು ಪಾಪದಿಂದ ತುಂಬಿದ ಮನುಷ್ಯರಿಗೆ ದೊರಕುವದಿಲ್ಲ; ಎಲ್ಲರೂ ಪಾಪದ ಬಂಧನದಲ್ಲಿ ಬಿದ್ದಿದ್ದಾರೆ. ಒಬ್ಬ ಬಂಧನದವನು ಮತ್ತೊಬ್ಬನ್ನ ಬಿಡಿಸುವನೋ? ಎಲ್ಲರೂ ಕುರುಡರಾದ ಮೇಲೆ ಒಬ್ಬನು ಒಬ್ಬನಿಗೆ ಹಾದಿ ತೋರಿಸ ಬಲ್ಲನೇ? ತಾನು ಮಾಡಿದ ಸಾಲ ತೀರಿಸಲಾರದ ಬಡವನು ಮತ್ತೊಬ್ಬನ ಸಾಲ ತೀರಿಸುವನೇ? ಮನುಷ್ಯರು ತಮ್ಮ ಪಾಪಗಳನ್ನು ಕಳಕೊಳ್ಳುವ ಉಪಾಯಗಳನ್ನು ಮಾಡಿದರು, ಸರಿ. ಆದರೆ ಆ ಉಪಾಯಗಳು ತೂತು ಬಿದ್ದ ಹರಗೋಲಿನ ಹಾಗಿರುತ್ತವೆ. ಸ್ವಂತ ಪಾಪದ ಬಲೆಯೊಳಗೆ ಶಿಕ್ಕೊಂಡ ಬ್ರಹ್ಮ, ವಿಷ್ಣು, ಶಿವಾದಿಗಳ ಪೂಜೆ ಮಾಡಿದರೆ ಪಾಪಜಾಲವಾದ ಬಲೆಯೊಳಗಿಂದ ಹ್ಯಾಗೆ ಬಿಡುಗಡೆಯಾದೀತು? ತಮ್ಮ ಮೇಲೆ ಬಿದ್ದಿರುವ ಮೈಲಿಗೆ ತೆಗೆಯಲಾರದ ಜೀವವಿಲ್ಲದ ಗೊಂಬೆಗಳು ನಿಮ್ಮ ಪಾಪದ ಮೈಲಿಗೆ ತೆಗೆಯ ಬಲ್ಲವೇ? ತಾವೇ ಪಾಪಿಷ್ಟರಾಗಿರುವ ಗುರುಗಳ ಪಾದೋದಕ ಕುಡಿದು, ಅವರ ಪಾದ ಪೂಜೆ ಮಾಡೋಣದರಿಂದ ಪಾಪವು ಕಳದು ಹೋಗುವದುಂಟೇ? ಕೆಲವರು ಪುಣ್ಯ ಮಾಡುವದರಿಂದ ಪಾಪ ಹೋಗುತ್ತದೆ ಯೆಂದು ಹೇಳುತ್ತಾರೆ. ಆದರೆ ಪಾಪ ತುಂಬಿದ ಹೃದಯದಿಂದ ಪುಣ್ಯ ಮಾಡಿದರೆ ನಮ್ಮ ಪುಣ್ಯಗಳು

ಪಾಪಗಳಾದಾವು. ಸೌಳು ನೀರಿನ ಬಾವಿಯಿಂದ ಹ್ಯಾಗೆ ಸವಿನೀರು ಬರುವದಿಲ್ಲವೋ, ಹಾಗೆಯೇ ಪಾಪ ತುಂಬಿರುವ ಮನುಷ್ಯರಿಂದ ದೇವರಿಗೆ ಸರಿಬೀಳುವಂಥ ನಿರ್ಮಲ ಪುಣ್ಯವು ಬರುವದಿಲ್ಲ. ಅರಸನ ಆಜ್ಞೆ ಮೀರಿದ ಚಾಕ್ರನು ಎಷ್ಟು ಪುಣ್ಯ ಮಾಡಿದಾಗ್ಯೂ ಧೊರೆ ಅವನ್ನ ಶಿಕ್ಷಿಸದೆ ಬಿಡುವನೋ? ಅರಸರು ಇಂಥ ಪುಣ್ಯಗಳನ್ನು ಲಕ್ಷ್ಕಕ್ಕೆ ತಾರದೆ ಇದ್ದರೆ ಅರಸರಿಗೆ ಅರಸನೂ ಕರ್ತರಿಗೆ ಕರ್ತನೂ ಆಗಿರುವ ಪರಮಾತ್ಮನು ಅವುಗಳನ್ನು ಹ್ಯಾಗೆ ಲಕ್ಷ್ಕಕ್ಕೆ ತರುವನು? ಆ ಪಾಪ ಕೂಡಿರುವ ಪುಣ್ಯಗಳ ನಿಮಿತ್ತವಾಗಿ ತನ್ನ ಆಜ್ಞೆಗಳ ಮೀರಿದವರನ್ನು ಶಿಕ್ಷಿಸದೆ ಬಿಡುವನೋ? ಅದು ಎಂದಿಗೂ ಆಗುವದಿಲ್ಲ.

ಹೀಗಿರಲಾಗಿ ಮನುಷ್ಯರೊಳಗೆ ಮುಕ್ತಿಯ ಉಪಾಯ ಇಲ್ಲದ ಹಾಗಾಯಿತು. ಮತ್ತು ದೇವರು ಇಂಥಾ ಉಪಾಯವನ್ನು ಉಚಿತವಾಗಿ ಮಾಡಿ ಕೊಡದಿದ್ದರೆ, ಮನುಷ್ಯರು ತಾವೇ ತಮ್ಮ ಪಾಪಗಳ ಶಿಕ್ಷೆಯನ್ನು ನರಕದ ಬಾಧೆಯಲ್ಲಿ ಉಣ್ಣ ಬೇಕಾಗಿತ್ತು. ಆದರೆ ಮನುಷ್ಯರು ಉಪಾಯವಿಲ್ಲದವರಾಗಿದ್ದಾರೆಂದು ದೇವರು ನೋಡಿ, ಕರುಣ ಪಟ್ಟು, ಮಿತಿ ಇಲ್ಲದ ಕರುಣೆಯಿಂದ ತಾನೇ ಒಂದು ಮುಕ್ತಿಯ ಉಪಾಯ ದಯಪಾಲಿಸಿ, ಒಬ್ಬ ಸದ್ಗುರುವನ್ನು ಕೊಟ್ಟನು. ಅದು ಹ್ಯಾಗಂದರೆ: ಆತನು ನಮ್ಮ ಪಾಪಗಳನ್ನು ಪರಿಹರಿಸಲಿಕ್ಕೆ

ತನ್ನ ಪ್ರತಿರೂಪವಾದ ಯೇಸು ಕ್ರಿಸ್ತನನ್ನು ಪರಲೋಕದಿಂದ ಭೂಲೋಕಕ್ಕೆ ಕಳುಹಿಸಿದನು. ಈ ಯೇಸು ಕ್ರಿಸ್ತನು ಇಂದಿಗೆ ಸಾವಿರದ ಎಂಟನೂರ ಅರುವತ್ತೇಳು ವರುಷಗಳ ಮುಂಚೆ ಹಿಂದು ದೇಶಕ್ಕೆ ಪಶ್ಚಿಮ ದಿಕ್ಕಿನಲ್ಲಿರುವ ಯೂದಾ ಎಂಬ ದೇಶದಲ್ಲಿ ಮನುಷ್ಯನಾಗಿ ಹುಟ್ಟಿದನು. ಅಲ್ಲಿ ಆತನು ಮೂವತ್ತುಮೂರು ವರುಷಗಳಿದ್ದನು. ಆತನ ಗುಣ ನಡತೆ ಹ್ಯಾಗಿದ್ದವೆಂದರೆ: ಆತನು ಯಾವ ದುರ್ಗುಣವೂ ದುರ್ನಡತೆಯೂ ಇಲ್ಲದವನಾಗಿ ಸಕಲ ಸುಗುಣಗಳಿಂದಲೂ ಸುನಡತೆಯಿಂದಲೂ ಪ್ರಕಾಶಿಸಿದನು. ಆತನು ಊರೂರಿಗೆ ಪಟ್ಣ ಪಟ್ಣಕ್ಕೆ ಹೋಗಿ ಎಲ್ಲರಿಗೆ ಬಹಳ ಪ್ರೀತಿಯಿಂದ ಮೋಕ್ಷ ಮಾರ್ಗವನ್ನು ತೋರಿಸಿದನು. ಮತ್ತು ಸಮಸ್ತರಿಗೆ, ಮುಖ್ಯವಾಗಿ ಬಡವರಿಗೂ ರೋಗಿಷ್ಟರಿಗೂ ಸಹಾಯ ಮಾಡಿ, ಕುರುಡರಿಗೆ ಕಣ್ಣು ಕೊಟ್ಟು, ಕಿವಡರಿಗೆ ಕಿವಿ ಕೊಟ್ಟು, ಮೂಕರಿಗೆ ಬಾಯಿ ಕೊಟ್ಟು, ದೆವ್ವ ಬಡದವರೊಳಗಿಂದ ದೆವ್ವ ಬಿಡಿಸಿ, ಸತ್ತವರನ್ನು ಯೆಬ್ಬಿಸಿದನು. ಮತ್ತು ಇದರ ಹೊರ್ತು ಅನೇಕ ಚಮತ್ಕಾರಗಳನ್ನೂ ಮಹಿಮೆಗಳನ್ನೂ ನಡಿಸಿದನು. ಆ ಮೇಲೆ ಆತನು ನಮ್ಮ ಪಾಪದ ಸಾಲಕ್ಕೆ ಹೊಣೆಗಾರನಾಗಿ ನಮ್ಮ ಪಾಪಗಳ ಶಿಕ್ಷೆ ತಾನೇ ಉಣ್ಣುವ ಹಾಗೆ ತನ್ನನ್ನು ತಾನೇ ದುಷ್ಟರ ಕೈಯಲ್ಲಿ ಒಪ್ಪಿಸಿ ಕೊಟ್ಟು, ಮಹಾ ಕಷ್ಟವನ್ನು ತಾಳಿ

ದನು. ಅದು ಹ್ಯಾಗಂದರೆ: ಅವರು ಆತನನ್ನು ಅಪಹಾಸ್ಯ
ಮಾಡಿದರು. ಆತನ ಮೋರೆಯ ಮೇಲೆ ಉಗುಳಿದರು. ಆ
ತನನ್ನು ಬಾರುಕೋಲಿನಿಂದ ಬಡೆದರು. ಆತನ ತಲೆಯ ಮೇ
ಲೆ ಮುಳ್ಳಿನ ಕಿರೀಟ ಹಾಕಿದರು. ಮತ್ತು ಆತನು ಹೀಗೆ ರಕ್ತ
ದಿಂದ ಘಾಯಗಳಿಂದ ತುಂಬಿದ ಮೇಲೆ ಆತನ್ನ ಮೊಳೆಗ
ಳಿಂದ ಒಂದು ಕಂಬಕ್ಕೆ ಜಡೆದರು. ಹೇಳಲಾರದ ಈ ಕಷ್ಟಗ
ಳನ್ನು ಆತನು ಅನಂತ ಶಾಂತಿಯಿಂದ ನಮ್ಮ ಸಲುವಾಗಿ ತಾಳಿ
ದನು. ಆ ಕಂಬದ ಮೇಲಿದ್ದು ಆರು ತಾಸಿನ ಬಳಿಕ ಪ್ರಾಣ
ಬಿಟ್ಟನು. ಆ ಮೇಲೆ ಆತನ ಶಿಷ್ಯರು ಬಂದು ಆತನ್ನ ಹುಗಿ
ದರು. ಆದರೆ ತಾನು ಮುಂಚೆ ಕಾಲಜ್ಞಾನ ಹೇಳಿದ ಹಾಗೆ
ಮೂರನೇ ದಿವಸದಲ್ಲಿ ಬಹಳ ಮಹಿಮೆಯಿಂದ ಸಮಾಧಿ
ಯೊಳಗಿಂದ ಎದ್ದು, ತನ್ನ ಶಿಷ್ಯರಿಗೆ ಪ್ರತ್ಯಕ್ಷವಾದನು. ಅಂ
ದಿನಿಂದ ನಾಲ್ವತ್ತು ದಿವಸಗಳ ಮೇಲೆ ಆತನು ತನ್ನ ಶಿಷ್ಯರಿಗೆ
ಆಜ್ಞೆ ಕೊಟ್ಟನಲ್ಲಾ: ನೀವು ಸಕಲ ದೇಶಗಳಿಗೆ ಹೋಗಿ, ನನ್ನ
ಸುವರ್ತಮಾನವನ್ನು ಸಕಲ ಮನುಷ್ಯರಿಗೆ ಸಾರಿ ಹೇಳಿರಿ.
ಯಾವನು ನಂಬುತ್ತಾನೋ, ಮತ್ತು ಸ್ನಾನ ಹೊಂದುತ್ತಾ
ನೋ, ಅವನಿಗೆ ಮುಕ್ತಿ ದೊರಕುವದು. ಆದರೆ ನಂಬಿಕೆ ಇಡದ
ವನಿಗೆ ನರಕ ಪ್ರಾಪ್ತಿಯಾದೀತು; ಎಂದು ಹೇಳಿದನು. ಈ ಆ
ಜ್ಞೆ ಕೊಟ್ಟ ಮೇಲೆ ಆತನು ಪರಲೋಕಕ್ಕೆ ಏರಿ ಹೋದನು; ಅಲ್ಲಿ

ಆತನು ಈಗ ಮಿತಿ ಇಲ್ಲದ ಮಹಿಮೆಯೊಳಗಿದ್ದು, ಭೂಲೋಕ ಪರಲೋಕಗಳನ್ನು ಆಳುತ್ತಾನೆ. ಮತ್ತು ಕಡೇ ದಿವಸದಲ್ಲಿ ಎಲ್ಲಾ ಮನುಷ್ಯರಿಂದ ಲೆಖ್ಖ ತಕ್ಕೊಳ್ಳಲಿಕ್ಕೆ ತಿರಿಗಿ ಬರುವನು.

ಈ ಸತ್ಯ ದೇವರ ಅವತಾರವಾದ ಯೇಸು ಕ್ರಿಸ್ತನು ಪರಲೋಕದ ಸುಖ ಬಿಟ್ಟು ಭೂಲೋಕಕ್ಕೆ ಬಂದು, ಇಂಥಾ ಅನಂತ ಬಾಧೆಗಳನ್ನು ಸಹಿಸಿ, ತನ್ನ ಜೀವವನ್ನು ಬಲಿಯಾಗಿ ಕೊಡೋಣಾದರಿಂದ ಆತನು ಮನುಷ್ಯರಿಗೋಸ್ಕರ ಯಾವ ಉಪಯೋಗ ಫಳಿಸಿದನಂದರೆ: ಆತನು ಅದರಿಂದ ಮನುಷ್ಯರ ಸಕಲ ಪಾಪಗಳನ್ನು ಪರಿಹರಿಸುವಂಥಾ ದಿವ್ಯ ಪುಣ್ಯದ ರಾಶಿ ಸಂಪಾದನೆ ಮಾಡಿದನು. ಈಗ ಯಾವ ಮನುಷ್ಯನು ತನ್ನ ಪಾಪಗಳ ನಿಮಿತ್ಯವಾಗಿ ದುಖ್ಖ ಪಟ್ಟು, ಈ ಪಾಪವಿಲ್ಲದ ಸದ್ಗುರುವಿನ ಪಾದಕ್ಕೆ ಬಿದ್ದು, ಆತನ ಮೇಲೆ ವಿಶ್ವಾಸ ಇಡುತ್ತಾನೋ, ಅವನಿಗೆ ಆತನು ತನ್ನ ಅವತಾರದ ಪುಣ್ಯದ ಪಾಲು ಕೊಟ್ಟು, ಅವನ ಪಾಪಗಳೆಲ್ಲಾ ತೊಳೆದು ಬಿಡುತ್ತಾನೆ. ಅವನಿಗೆ ಈ ಲೋಕದಲ್ಲಿ ಸಮಾಧಾನವೂ ನಿರ್ಮಲಮನಸ್ಸೂ ಕೊಟ್ಟು, ಸತ್ತ ಮೇಲೆ ಅವನ್ನ ತನ್ನ ಮುಕ್ತಿ ಪಟ್ಣಕ್ಕೆ ವೈಯುವನು.

ಎಲೇ! ಹಿಂದು ಜನರೇ, ಇಂಥಾ ಪಾಪವಿಲ್ಲದ ಸದ್ಗುರು ಇಂಥಾ ಪುಣ್ಯದ ಮೂರ್ತಿ ನಿಮ್ಮಲ್ಲಿ ಶಿಕ್ಕುವದುಂಟೋ? ಪಾಪದ ಸಮುದ್ರದಲ್ಲಿ ಬಿದ್ದಂಥಾ ಬ್ರಹ್ಮ, ವಿಷ್ಣು,

ಶಿವಾದಿಗಳು ನಿಮ್ಮ ಪಾಪ ಹ್ಯಾಗೆ ತೆಗೆಯುವವು. ಬಡಿಗೆಯರಿಂದ ಕಲ್ಲುಕುಟಿಗರಿಂದ ಮಾಡಿದ, ಹೆಣದ ಹಾಗಿರುವಂಥ, ಗೊಂಬೆಗಳು ನಿಮ್ಮ ಪಾಪ ಪರಿಹಾರ ಮಾಡ್ಯಾವೇ? ಮತ್ತು ತಾವೇ ಪಾಪಿಷ್ಟರಾಗಿರುವ ಗುರುಗಳ ಪಾದ ತೀರ್ಥದಿಂದ ಮತ್ತೊಬ್ಬರ ಪಾಪ ತೊಳೆಯಲಿಕ್ಕೆ ಆಗುವದೇ? ಅದು ಎಂದಿಗೂ ಆಗಲಿಕ್ಕಿಲ್ಲ. ಆದದರಿಂದ ಈ ಸಕಲ ಮಾತುಗಳು ನಿಮ್ಮ ಮನಸ್ಸಿನಲ್ಲಿ ತೂಗಿ ನೋಡಿ, ಅನರ್ಥ ಮಾರ್ಗ ಬಿಟ್ಟು ಸನ್ಮಾರ್ಗಕ್ಕೆ ತಿರುಗಿರಿ. ಹಿಂದಿನ ಕಾಲದಲ್ಲಿ ವಿಲಾಯತಿ ಜನರು ಹೀಗೆ ಮಾಡಿದರು. ಅದು ಹ್ಯಾಗಂದರೆ: ಅವರು ಪೂರ್ವದಲ್ಲಿ ಅಜ್ಞಾನದ ಕತ್ತಲೆಯಲ್ಲಿ ನಡದು, ಈ ಜನರ ಹಾಗೆಯೇ ಅನೇಕ ಸುಳ್ಳು ದೇವರುಗಳಿಗೆ ಪಂಚಾಳರಿಂದ ಮಾಡಿದ ಗೊಂಬೆಗಳಿಗೆ ಪೂಜೆ ಮಾಡಿದರು. ಆದರೆ ಆ ಮೇಲೆ ಯೇಸು ಕ್ರಿಸ್ತನ ಮಾರ್ಗ ತಿಳಿಸುವ ಗುರುಗಳು ವಿಲಾಯತಿಗೆ ಬಂದು, ಉಪದೇಶ ಮಾಡಿದರು. ತರುವಾಯ ವಿಲಾಯತಿ ಜನರು, ತಮ್ಮ ದೇವರುಗಳು ಸುಳ್ಳೆಂದು ತಿಳಿದು, ಅವುಗಳನ್ನು ಬಿಸುಟು ಯೇಕೋ ದೇವಪರಮಾತ್ಮನಿಗೆ ಆತನ ಅವತಾರವಾದ ಯೇಸು ಕ್ರಿಸ್ತನಿಗೆ ನಡ ಕೊಂಡರು. ಅಂದಿನಿಂದ ವಿಲಾಯತಿಯಲ್ಲಿ ಜ್ಞಾನ ನೀತಿ ನ್ಯಾಯ ಸಮಾಧಾನ ಬಹಳ ಹೆಚ್ಚಾಯಿತು. ಆ ಸಮಯದಿಂದ ಯೇಸು

ಕ್ರಿಸ್ತನ ಮಾರ್ಗವು ಬೆಳದು ಬೆಳದು ಅನೇಕ ದೇಶಗಳಲ್ಲಿ ಹರಿಯಿತು. ಈಗ ಶುಮಾರು ಇಪ್ಪತ್ತೈದು ಕೋಟಿ ಮನುಷ್ಯರು ಯೇಸು ಕ್ರಿಸ್ತನ ಮಾರ್ಗ ಹಿಡಿದರು. ಪರಮಾತ್ಮನ ಕೃಪೆಯಿಂದ ಆ ಮಾರ್ಗವು ಈಗ ಈ ದೇಶಕ್ಕೆ ಸಹಾ ಬಂದಿರುತ್ತದೆ. ಜ್ಞಾನಸೂರ್ಯ ಮೂಡಿ, ಅಜ್ಞಾನದ ಕತ್ತಲೆಯು ಹರಿಯುವ ಹಾಗಿದೆ. ಅದರಿಂದ ನಾಶಕ್ಕೆ ವೈಯುವ ಸುಳ್ಳು ಮಾರ್ಗಗಳನ್ನ ಬಿಟ್ಟು, ಇಲ್ಲಿ ತನಕ ಮರತು ಬಿಟ್ಟ ಪರಲೋಕದ ತಂದೆಯ ಕಡೆಗೆ ಪೂರ್ಣ ಮನಸ್ಸಿನಿಂದ ತಿರುಗಿ, ಯೇಸು ಕ್ರಿಸ್ತನಿಗೆ ಬೇಗ ಶರಣು ಹೋಗಿರಿ. ಆಲಸ್ಯ ಮಾಡ ಬಾರದು, ಸಾಯುವ ದಿನ ತಿಳಿಯುವದಿಲ್ಲ; ಮತ್ತು ದೇವರ ದೊಡ್ಡ ವಿಚಾರಣೆಯ ದಿವಸ ಬೇಗ ಬರುತ್ತದೆ. ಯಾತಕಂದರೆ ಸಕಲ ಮನುಷ್ಯರಿಗೆ ವಿಚಾರಣೆ ಮಾಡಿ ನ್ಯಾಯತೀರಿಸುವದಕ್ಕೆ ಯೇಸು ಕ್ರಿಸ್ತನು ತಿರಿಗಿ ಮಿತಿಯಿಲ್ಲದ ಮಹಿಮೆಯಿಂದ ಬರುವನು. ಆ ದಿವಸದಲ್ಲಿ ಆತನು ಭೂಮಿ ಹುಟ್ಟಿದ ದಿನ ಮೊದಲುಗೊಂಡು ಕಡೇ ದಿನ ಪರ್ಯಂತರ ಸತ್ತು ಹೋದವರೆಲ್ಲರನ್ನು ಏಳ ಮಾಡುವನು. ಮತ್ತು ಒಬ್ಬ ಕುರುಬನು ಕುರಿಗಳನ್ನೂ ಆಡುಗಳನ್ನೂ ಹ್ಯಾಗೆ ಬೇರೆ ಮಾಡುತ್ತಾನೋ, ಹಾಗೆಯೇ ಆತನು ನೀತಿವಂತರನ್ನೂ ಪಾಪಿಷ್ಟರನ್ನೂ ಬೇರೆ ಬೇರೆ ಮಾಡಿ, ನೀತಿವಂತರಿಗೆ ಹೇಳುವದೇನಂದರೆ: ನನ್ನ ತಂದೆಯಿಂದ ಆಶೀ

ರ್ವಾದ ಹೊಂದಿದವರೇ ಬರ್ರಿ. ಜಗತ್ತು ಹುಟ್ಟಿದಾರಭ್ಯದಿಂದ ನಿಮಗೆ ಸಿದ್ಧ ಮಾಡಿದ ರಾಜ್ಯವನ್ನು ಸ್ವಾಧೀನವಾಗಿ ತಕ್ಕೊಳ್ಳಿರಿ. ಆದರೆ ಪಾಪಿಷ್ಟರಿಗೆ ಆತನು ಹೇಳುವದೇನಂದರೆ: ಶಾಪಗ್ರಸ್ಥರೇ, ನೀವು ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧ ಮಾಡಿದ ನಿತ್ಯವಾದ ಬೆಂಕಿಯೊಳಗೆ ಹೋಗಿರಿ.

ಅಯ್ಯೋ! ದುರ್ಗತಿ ಸದ್ಗತಿ ಮುಂದೆ ಉಂಟು. ಮರಣವು ಬೇಗನೇ ಎದುರು ಬರುತ್ತದೆ. ಅದುಕಾರಣ ಸಿದ್ಧರಾಗ ಬೇಕೆಂಬದು ಜನರು ಯಾತಕ್ಕೆ ಮನಸ್ಸಿಗೆ ತರುವದಿಲ್ಲ? ಯಾಕೆ ಅವರು ಮುಂದೆ ಕಾಣದ ಕುರುಡರ ಹಾಗೆ ತಮ್ಮ ಪಾಪಗಳಲ್ಲಿ ನಿದ್ರೆ ಮಾಡುತ್ತಾರೆ? ನಿಶ್ಚಯವಾಗಿ ಇದು ಪಿಶಾಚನ ಮೋಸವು. ಇವನು ಅವರ ಆತ್ಮದ ಕಂಣುಗಳನ್ನು ಮುಚ್ಚಿ, ಎಲ್ಲರನ್ನ ನರಕಕ್ಕೆ ಎಳೆಯಲಿಕ್ಕೆ ಯತ್ನ ಮಾಡುತ್ತಾನೆ. ಇವನ ಮೋಸದ ಬಲೆಯೊಳಗಿಂದ ಪಾಪಿಗಳನ್ನು ಬಿಡಿಸಲಿಕ್ಕೆ ಯೇಸು ಕ್ರಿಸ್ತನು ಶಕ್ತನಾಗಿರುತ್ತಾನೇ ಹೊರ್ತು ಮತ್ತೊಬ್ಬನಿಲ್ಲ; ಅದುಕಾರಣ ಶೀಘ್ರವಾಗಿ ಆತನ ಮರೆ ಹೊಕ್ಕು, ಪಿಶಾಚನ ಬಲೆಯೊಳಗಿಂದ ನರಕದ ಮಹಾ ಬಾಧೆಯಿಂದ ನಿತ್ಯ ಬಿಡುಗಡೆ ಹುಡಿಕಿರಿ. ಈ ಹೊತ್ತು ನಿಮ್ಮ ಸ್ವಾಧೀನದಲ್ಲಿದೆ ನಾಳೆ ಇಲ್ಲ ಎಂದು ಚಿತ್ತಕ್ಕೆ ತಂದು, ವೊಂದು ಕ್ಷಣ ಮಾತ್ರ ತಡ ಮಾಡದೆ ಮೋಕ್ಷ ಸಾಧಿಸಲಿಕ್ಕೆ ಕಷ್ಟ ಪಡಿರಿ.

ಜ್ಞಾನಕ್ಕಾಗಿ ಮಾಡಿದ ಪ್ರಾರ್ಥನೆ.

ನನ್ನನ್ನು ಹುಟ್ಟಿಸಿ ಸಂರಕ್ಷಣೆ ಮಾಡುವ ಕೃಪೆಯುಳ್ಳ ಪರಮಾತ್ಮನೇ, ನಾನು ಅಜ್ಞಾನದ ಕತ್ತಲೆಯಲ್ಲಿ ಬಿದ್ದ ಪಾಪಿಷ್ಠನಾಗಿದ್ದೇನೆ. ತಪ್ಪಿ ಹೋದ ಕುರಿಯ ಹಾಗೆ, ಅಡ್ಡ ದಾರಿಗಳಲ್ಲಿ ಶಿಲುಕಿ ಕೊಂಡು, ಮೋಸ ಹೋಗುತ್ತಾ ಇದ್ದೇನೆ. ಸುಖ ಹುಡುಕಿದೆ, ಆದರೆ ದುಃಖ ಬಂತು. ಸಮಾಧಾನ ಹುಡುಕಿದೆ, ಆದರೆ ಚಿಂತೆ ಬಂತು. ಮನುಷ್ಯರನ್ನು ಕೇಳಿದೆ, ಅವರು ತೋರಿಸುವ ಮಾರ್ಗದಲ್ಲಿ ಶಿಲುಕಿದೆ; ಆದರೆ ಜೀವದ ಮಾರ್ಗ ನನಗೆ ಶಿಕ್ಕಲಿಲ್ಲ. ಆದದರಿಂದ ನಾನು ನಿನ್ನ ಬಳಿಗೆ ಬರುತ್ತೇನೆ; ನೀನು ಕೃಪೆ ಮಾಡಿ ನನ್ನನ್ನು ಅಜ್ಞಾನದ ಕತ್ತಲೆಯಿಂದ ಬಿಡಿಸು. ಜ್ಞಾನದ ಬೆಳಕು ನನ್ನಲ್ಲಿ ಪ್ರಕಾಶಿಸ ಮಾಡು. ನನ್ನನ್ನು ನರಕದ ಹಾದಿಯಿಂದ ಎಳದು ನಿನ್ನ ಮೋಕ್ಷ ಮಾರ್ಗದಲ್ಲಿ ನಡಿಸು. ನನ್ನ ಪಾಪಗಳನ್ನು ಪರಿಹಾರ ಮಾಡು; ನನಗೆ ನಿರ್ಮಲ ಮನಸ್ಸನ್ನು ದಯಪಾಲಿಸು. ಮತ್ತು ಸತ್ತ ಮೇಲೆ ನನ್ನನ್ನು ನಿನ್ನ ಮೋಕ್ಷ ಪಟ್ಣದಲ್ಲಿ ಶೇರಿಸು. ಆಮೆನ್.

ಸಮಾಪ್ತಿ.



THE

WAY OF WISDOM

ಜ್ಞಾನಮಾರ್ಗಸೂಚನೆ

ಒಂಭತ್ತನೆ ಛಾಪೆ



MANGALORE
PUBLISHED BY PFLEIDERER & RIEHM
1866

Price 1 Pie. ಕ್ರಯ ೧ ಪೈ.